■ ವಿಶಾಖ ಎನ್.

# ಸ್ನೇಹ ಅತಿ ಮಧುರ: ಕಂಗನಾಗೆ ಆಶಾ ಮಾತಿನುತ್ತರ



ಕಂಗನಾ ರನೌತ್



ಆಶಾ ಪಾರೇಖ್

ಕಂಗನಾ ರನೌತ್ ಆಗೀಗ ಕಲ್ಲು ಹೊಡೆಯುವವರ ಪೈಕಿ. ಕಲ್ಲು ಯಾವ ಹಣ್ಣಿಗೆ ಯಾವಾಗ ತಗುಲಬೇಕು ಎಂದುಕೊಳ್ಳುತ್ತಾರೋ, ಆಗಲೇ ಆ ಹಣ್ಣಿಗೆ ಹತ್ತಿರದಲ್ಲೇ ನಿಂತು ಗುರಿ ಇಟ್ಟು ಎಸೆಯುವುದು ಅವರಿಗೆ ರೂಢಿ. ರಾಜಕೀಯದ ಸ್ಟೇಟ್‌ಮೆಂಟ್‌ಗಳಿಂದಾಗಿ ಪದೇಪದೇ ಟ್ರೋಲ್‌ಗಳಿಗೆ ಒಳಗಾಗುವುದಕ್ಕೂ ಒಗ್ಗಿಹೋಗಿರುವ ಅವರು ಇತ್ತೀಚೆಗೆ ರಾಜಕೀಯೇತರ ಸ್ಟೇಟ್‌ಮೆಂಟ್ ಒಂದನ್ನು ಮಾಡಿದರು. 'ಚಿತ್ರರಂಗದಲ್ಲಿ ನಿಜ ಸ್ನೇಹಿತರಿಗೆ ಹುಡುಕಬೇಕು. ಸ್ನೇಹ ಇದ್ದಂತೆ ಕಂಡರೂ ಅದು ಸುಳ್ಳೆಸುಳ್ಳು' ಎಂದು ಹೇಳಿದ್ದರು.

ನಾಲ್ಕು ದಶಕಗಳ ಕಾಲ ಹಿಂದಿ ಸಿನಿಮಾಗಳಲ್ಲಿ ಅಭಿನಯಿಸಿ ಪಳಗಿದ ನಟಿ ಆಶಾ ಪಾರೇಖ್ ಅವರಿಗೆ ಕಂಗನಾ ಮಾತು ಜೀರ್ಣವಾಗಲಿಲ್ಲ. ಅವರು ಅದಕ್ಕೆ ತಮ್ಮ ಉದಾಹರಣೆಯನ್ನೇ ಕೊಟ್ಟರು. 'ವಹೀದಾ ರೆಹಮಾನ್, ಹೆಲೆನ್ ಇಬ್ಬರೂ ನನಗೆ ಆಪ್ತಸ್ನೇಹಿತೆಯರು. ಯಾವತ್ತೂ ನಮ್ಮ ನಡುವೆ ಸ್ನೇಹಕ್ಕೆ ಅಡ್ಡಿ ಬಂದದ್ದೇ ಇಲ್ಲ. ನಾವು ಸುಂದರ ಕ್ಷಣಗಳನ್ನು ಒಟ್ಟೊಟ್ಟಿಗೆ ಕಳೆದಿದ್ದೇವೆ. ಬಾಲಿವುಡ್‌ನಲ್ಲಿ ಸ್ನೇಹಿತರೇ ಇಲ್ಲ ಎಂದು ಜನರಲೈಸ್ ಮಾಡಿ ಸ್ಟೇಟ್‌ಮೆಂಟ್ ಕೊಟ್ಟರೆ ಹೇಗೆ' ಎಂಬರ್ಥದಲ್ಲಿ ಆಶಾ ಪಾರೇಖ್ ಪ್ರತಿಕ್ರಿಯಿಸಿದರು.

ಕಂಗನಾ ತಮಗೆ ಆದ ಅನುಭವವನ್ನಷ್ಟೇ ಹೇಳಿಕೊಳ್ಳುವುದಿದ್ದರೆ ಸಾಮಾನ್ಯೀಕರಿಸಿ ಸ್ಟೇಟ್‌ಮೆಂಟ್ ಕೊಡಬಾರದಿತ್ತು ಎನ್ನುವುದನ್ನು ಆಶಾ ಸೂಚ್ಯವಾಗಿ ಹೇಳಿದರು. 'ಕಂಗನಾ ಯಾಕೆ ಸ್ನೇಹಿತರನ್ನು ಮಾಡಿಕೊಳ್ಳುತ್ತಿಲ್ಲ ಎಂದು ಅವರನ್ನೇ ಕೇಳಬೇಕಿತ್ತು' ಎನ್ನುವ ಮೂಲಕ ಅವರ ಟೀಕಾಬಲೂನಿಗೆ ವ್ಯಂಗ್ಯದ ಸೂಜಿಮೊನೆಯನ್ನೂ ತಾಗಿಸಿದರು.

ಕಂಗನಾ ಅಭಿನಯದ 'ತೇಜಸ್' ಹಿಂದಿ ಸಿನಿಮಾ ಅಕ್ಟೋಬರ್ 27ರಂದು ತೆರೆಕಾಣಲಿದೆ. ಅದರ ಪ್ರಚಾರದಲ್ಲೂ ತೊಡಗಿರುವ ಅವರು, ಭಾರತೀಯ ಚಿತ್ರರಂಗದಲ್ಲಿ ಸಾಚಾ ಸ್ನೇಹಿಗಳನ್ನು ಹುಡುಕಬೇಕಿದೆ ಎನ್ನುವ ಈ ಸ್ಟೇಟ್‌ಮೆಂಟನ್ನು ಗಮನಸೆಳೆಯಲೆಂದೇ ಪ್ರಯೋಗಿಸಿದ್ದಾರೆ ಎಂದು ಕೆಲವರು ಟೀಕೆ ಕೂಡ ಮಾಡಿದ್ದಾರೆ. ■

# ಪುಷ್ಪಾ 2 ಮಾರುಕಟ್ಟೆ ವಿಸ್ತರಣಾ ತಂತ್ರ



ಎರಡು ಭಾಗಗಳಲ್ಲಿ ಸಿನಿಮಾ ಬಿಡುಗಡೆ ಮಾಡುವ ಚಾಳಿಗೆ ಇಂಧನ ಸುರಿದ ಶ್ರೇಯ 'ಬಾಹುಬಲಿ', 'ಕೆಜಿಎಫ್' ಹಾಗೂ 'ಪುಷ್ಪಾ' ಮೂರಕ್ಕೂ ಸಲ್ಲಬೇಕು. ಶಂಕರ್ ಕೂಡ ತಮಿಳಿನ 'ರೋಬೊ' ನಂತರ '2.0' ತೆರೆಗೆ ತಂದು, ಕಪ್ಪು ಚುಕ್ಕೆ ಮೂಡಿಸಿಕೊಂಡಿದ್ದರು. ಮೊದಲ ಸಿನಿಮಾದಲ್ಲಿ ಇದ್ದ ಸತ್ವ ಎರಡನೆಯದರಲ್ಲಿ ಇರಲಿಲ್ಲ ಎಂದು ಅನೇಕರು ವಿಮರ್ಶಿಸಿದ್ದರು. ಆದರೆ, 'ಕೆಜಿಎಫ್' ಇಂತಹ ಎಡವಟ್ಟು ಆಗದಂತೆ ನೋಡಿಕೊಳ್ಳಬಹುದು ಎನ್ನುವುದನ್ನು ಗಳಿಕೆಯ ಮೂಲಕ ಸಾಬೀತುಪಡಿಸಿತು. ನಿರ್ದೇಶಕ ಸುಕುಮಾರ್ ಕೂಡ ಈಗ 'ಪುಷ್ಪಾ 2' ತೆಲುಗು ಸಿನಿಮಾವನ್ನು ಸಿಂಗರಿಸುವುದರಲ್ಲಿಯೇ ನಿರತರಾಗಿದ್ದಾರೆ.

2021ರಲ್ಲಿ 'ಪುಷ್ಪಾ 1' ತೆರೆಕಂಡಿತ್ತು. 2024ರ ಆಗಸ್ಟ್ 15ರಂದು 'ಪುಷ್ಪಾ 2' ತೆರೆಕಾಣಲಿದೆ ಎಂದು ನಿರ್ಮಾಣ ಸಂಸ್ಥೆಯವರು 'ಎಕ್ಸ್'ನಲ್ಲಿ ಪ್ರಕಟಿಸಿದ್ದಾರೆ. ರಶ್ಮಿಕಾ ಮಂದಣ್ಣ, ಫಹಾದ್ ಫಾಸಿಲ್ ಇಬ್ಬರ ಪಾತ್ರಗಳು ಎರಡನೆಯ ಭಾಗದಲ್ಲೂ ಮುಂದುವರಿಯಲಿವೆ. ಮೊದಲ ಭಾಗದ ಅಂತ್ಯದಲ್ಲಿ ಫಹಾದ್ ಪಾತ್ರವು ಕುತೂಹಲ ಮೂಡಿಸಿತ್ತು. ಎರಡನೆಯರದಲ್ಲಿ ಆ ಪಾತ್ರ ಹೆಚ್ಚು ಅವಧಿ ತೆರೆಯನ್ನು ಆವರಿಸಿಕೊಳ್ಳುವ ಸಾಧ್ಯತೆ ಇದೆ.

'ಸುಕುಮಾರ್ ಹೊಸ ಪ್ರಪಂಚವೊಂದನ್ನು ತೆರೆದಿಡುತ್ತಾರೆ. ಹೀಗಾಗಿ ಅವರ ಸಿನಿಮಾಗಳು ನಮ್ಮನ್ನು ಬೇರೆಯದೇ ಲೋಕಕ್ಕೆ ಕರೆದುಕೊಂಡು ಹೋಗಿ, ಏನೇನನ್ನೋ ತೋರಿಸಿಕೊಂಡು ಮತ್ತೆ ಇನ್ನೆಲ್ಲಿಯೋ ನಿಲ್ಲಿಸುತ್ತವೆ. ಹೀಗಾಗಿಯೇ ಅವರು ಕಟ್ಟುವ ಪಾತ್ರಗಳ ಪ್ರಯಾಣ ಹೇಗಿರುತ್ತದೆ ಎನ್ನುವುದನ್ನು ಯಾರೂ ಊಹಿಸಲು ಸಾಧ್ಯವಿಲ್ಲ' ಎಂದು ನಿರ್ದೇಶಕ ರಾಜಮೌಳಿ ಹೊಗಳಿದ್ದರು.

ಸಾಮಾನ್ಯವಾಗಿ ಇಷ್ಟು ದೀರ್ಘಾವಧಿಯನ್ನು ಅಲ್ಲು ಅರ್ಜುನ್ ಒಂದು ಸಿನಿಮಾ ಮೇಲೆ ವ್ಯಯ ಮಾಡುತ್ತಿರಲಿಲ್ಲ. ಅವರಿಗೂ ಈಗ ತಮ್ಮ ಮಾರುಕಟ್ಟೆಯ ಅರಿವಿದೆ. ಸಿನಿಮಾ ಬಿಡುಗಡೆಯ ದಿನಾಂಕವನ್ನು ಬೇಗ ಪ್ರಕಟಿಸುವುದು ಕೂಡ ಮಾರುಕಟ್ಟೆಯ ತಂತ್ರ. ದೇಶಿ–ವಿದೇಶಿ ಮಾರುಕಟ್ಟೆಯಲ್ಲಿ ಸಿನಿಮಾ ಬಿಡುಗಡೆಯ ಹಕ್ಕು ಖರೀದಿಸಲು ಪೈಪೋಟಿಯನ್ನು ಹೆಚ್ಚು ಮಾಡುವ ದಾರಿ ಇದಾಗಿದೆ. ಇನ್ನು ಹತ್ತು ತಿಂಗಳು 'ಪುಷ್ಪಾ 2' ಮಾರುಕಟ್ಟೆ ವಿಸ್ತರಣೆಯದ್ದೇ ಕಾರುಬಾರು ಎಂದರ್ಥ. ■